# ದಿನಾಂಕ:20–12–2013 ರಂದು ತೋಟಗಾರಿಕೆ ಸ್ಥಾಯಿ ಸಮಿತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಉದ್ಯಾನವನಗಳ ಅಭಿವೃದ್ಧಿ ಮತ್ತು ನಿರ್ವಹಣೆ ಹಾಗೂ ನಗರವ್ಯಾಪ್ತಿ ಅರಣ್ಯೀಕರಣ ಮತ್ತು ಪರಿಸರ ನಿರ್ವಹಣೆ ಮತ್ತು ಕೆರೆಗಳ ಅಭಿವೃದ್ಧಿ ಕಾಮಗಾರಿಗೆ ಸಂಬಂಧಪಟ್ಟಂತೆ ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರು ಶ್ರೀಯುತರಾದ : | | | ಹಾಜರಿದ್ದ ಅಧಿಕಾರಿಗಳು ಶ್ರೀಯುತರಾದ | |
|---|---|---|---|---|
| 1 | **ಎಂ.ಮುನಿರಾಜು** | ಅಧ್ಯಕ್ಷರು | 1 | ಕೌನ್ಸಿಲ್ ಕಾರ್ಯದರ್ಶಿ |
| 2 | **ಎಸ್.ಹೆಚ್.ಪದ್ಮರಾಜ್** | ಸದಸ್ಯರು | 2 | ಉಪ ಅರಣ್ಯ ಸಂರಕ್ಷಣಾಧಿಕಾರಿ |
| 3 | **ಎಂ.ಸಿ.ಶ್ರೀನಿವಾಸ್** | ಸದಸ್ಯರು | 3 | ವಲಯ ಅರಣ್ಯಾಧಿಕಾರಿಗಳು (ಪೂರ್ವ/ ಪಶ್ಚಿಮ/ ದಕ್ಷಿಣ/ ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ/ ರಾಜರಾಜೇಶ್ವರಿನಗರ) |
| 4 | **ಆರ್.ಪಿ.ಶಶಿ** | ಸದಸ್ಯರು | | |
| 5 | **ಪುಟ್ಟಮ್ಮ** | ಸದಸ್ಯರು | 4 | ತೋಟಗಾರಿಕೆ ಅಧೀಕ್ಷಕರು (ಪೂರ್ವ/ಪಶ್ಚಿಮ/ದಕ್ಷಿಣ/ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ/ರಾಜರಾಜೇಶ್ವರಿನಗರ) |
| 6 | **ವಿಜಯ ಎಸ್.ಎಸ್.ಪ್ರಸಾದ್** | ಸದಸ್ಯರು | | |
| 7 | **ಎಸ್.ಗಂಗಾಧರ್** | ಸದಸ್ಯರು | 5 | ಕಾ.ಪಾ.ಅ.(ಯೋಜನೆ–ದಾಸರಹಳ್ಳಿ/ಪೂರ್ವ/ಪಶ್ಚಿಮ/ರಾಜರಾಜೇಶ್ವರಿನಗರ/ ಮಹದೇವಪುರ |
| 8 | **ಕೆ.ಆರ್.ಯಶೋಧಮ್ಮ** | ಸದಸ್ಯರು | | |
| 9 | **ಪಳನಿಯಮ್ಮಾಳ್** | ಸದಸ್ಯರು | 6 | ಕಾರ್ಯಪಾಲಕ ಅಭಿಯಂತರರು(ಯೋಜನೆ–ಕೆರೆಗಳು) |
| 10 | **ಲಲಿತಾ** | ಸದಸ್ಯರು | | |
| 11 | **ಗೋಪಾಲಕೃಷ್ಣ.ಟಿ** | ಸದಸ್ಯರು | | |

**(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)**

ಮಾನ್ಯ ಅಧ್ಯಕ್ಷರು ಸಭೆಯ ಅಧ್ಯಕ್ಷತೆ ವಹಿಸಿ ಸಭೆಯಲ್ಲಿ ಹಾಜರಿದ್ದ ಸಮಿತಿ ಸದಸ್ಯರು ಹಾಗೂ ಅಧಿಕಾರಿಗಳಿಗೆ ಹೃತ್ಪೂರ್ವಕವಾದ ಸ್ವಾಗತ ಕೋರಿದರು.

**ಕೆರೆಗಳು–ಪರಿಸರ ಕೋಶಕ್ಕೆ** ಸಂಬಂಧಪಟ್ಟಂತೆ ಅಧ್ಯಕ್ಷರು ಮಾತನಾಡುತ್ತಾ, ದಿನಾಂಕ: 26–10–2013 ಮತ್ತು 30–11–2013 ರಂದು ಸಮಿತಿಯಿಂದ 2011–12 ಮತ್ತು 2012–13ನೇ ಸಾಲಿನಲ್ಲಿ ಕೆರೆಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ ಸಂಬಂಧಪಟ್ಟಂತೆ ಅಭಿವೃದ್ಧಿಪಡಿಸುತ್ತಿರುವ ಹಾಗೂ ಪ್ರಗತಿಯಲ್ಲಿರುವ ಕಾಮಗಾರಿ ಕಡತಗಳನ್ನು ಸಮಿತಿಯ ಪರಿಶೀಲನೆಗೆ ಒದಗಿಸುವಂತೆ ಪತ್ರ ಮುಖೇನ ಕೋರಲಾಗಿತ್ತು. ಆದರೆ, ಇದುವರೆವಿಗೂ ಯಾವುದೇ ಕಡತಗಳು ಸಮಿತಿಯ ಪರಿಶೀಲನೆಗೆ ಬಂದಿರುವುದಿಲ್ಲವೆಂದು ಅಸಮಾಧಾನ ವ್ಯಕ್ತಪಡಿಸುತ್ತಾ, ಕಡತಗಳ ವಿಳಂಬಕ್ಕೆ ಕಾರಣ ನೀಡಲು ಅಧಿಕಾರಿಗಳಿಗೆ ಸೂಚಿಸುತ್ತಾ, ಒಂದು ವಾರದೊಳಗೆ ಕಡತಗಳನ್ನು ಸಮಿತಿಯ ಪರಿಶೀಲನೆಗೆ ಒದಗಿಸಲು ಹಾಜರಿದ್ದ ಅಧಿಕಾರಿಗಳಿಗೆ ಸೂಚಿಸಿದರು.

**ಶ್ರೀ.ಗಂಗಹನುಮಯ್ಯ,** ಕಾರ್ಯಪಾಲಕ ಅಭಿಯಂತರರವರು ಮಾತನಾಡುತ್ತಾ, ಸಮಿತಿಯಿಂದ ಕಳುಹಿಸಲಾಗಿರುವ ಪತ್ರದಲ್ಲಿರುವ ಕಡತಗಳನ್ನು ಆಯುಕ್ತರು ಆದೇಶ ನೀಡಿದ ನಂತರ ಕಳುಹಿಸಲಾಗುವುದೆಂದು, ಆಯುಕ್ತರಿಂದ ಆದೇಶ ಬಂದ ತಕ್ಷಣವೇ ಕಡತಗಳನ್ನು ಸಮಿತಿಯ ಪರಿಶೀಲನೆಗೆ ಕಳುಹಿಸಲಾಗುವುದೆಂದು ಅಧ್ಯಕ್ಷರಲ್ಲಿ ಮನವಿ ಮಾಡಿದರು.

**ಅಧ್ಯಕ್ಷರು** ಮಾತನಾಡುತ್ತಾ, ಉದ್ಯಾನವನಗಳಿಗೆ ಭದ್ರತಾ ಸಿಬ್ಬಂದಿಯ ನೇಮಕ ಮಾಡಿಕೊಳ್ಳಲು ಪಿ.ಓ.ಡಬ್ಲ್ಯೂ.ನಲ್ಲಿ ಕೋಡ್ ಪಡೆದುಕೊಳ್ಳಲಾಗಿದೆಯೇ ಎಂದು ಪ್ರಶ್ನಿಸಿದರು.

**ಶ್ರೀ.ಗಂಗಹನುಮಯ್ಯ,** ಕಾರ್ಯ ಪಾಲಕ ಅಭಿಯಂತರರವರು ಮಾತನಾಡುತ್ತಾ, ಕೋಡ್ ತೆಗೆದುಕೊಳ್ಳಲು ವಿಳಂಬವಾಗುವ ದೃಷ್ಠಿಯಿಂದ ಬಜೆಟ್‌ನಲ್ಲಿರುವ ಅನುದಾನವನ್ನು ನಿರೀಕ್ಷಿಸಿ ಟೆಂಡರ್ ಕರೆಯಲಾಗಿದೆ. ಸೆಕ್ಯೂರಿಟಿ ಗಾರ್ಡ್‌ಗಳಿಗೆ ಕೋಡ್ ಅವಶ್ಯಕತೆ ಇಲ್ಲವೆಂದು, ಟೆಂಡರ್ ಆದನಂತರ ಕೋಡ್ ತೆಗೆದುಕೊಳ್ಳಲಾಗುತ್ತದೆಂದು ತಿಳಿಸಿದರು.

**ಅಧ್ಯಕ್ಷರು** ಮಾತನಾಡುತ್ತಾ, ಪಾಲಿಕೆಯ ನಿಯಮಾವಳಿಗಳ ಪ್ರಕಾರ ಕೋಡ್ ಪಡೆದುಕೊಂಡು ಕೆಲಸ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸುತ್ತಾ, *2013–14ನೇ ಸಾಲಿನ ಕಾರ್ಯಕ್ರಮ (ಪಿ.ಓ.ಡಬ್ಲ್ಯೂ) ಪಟ್ಟಿಗೆ ಈಗಾಗಲೇ ಸಮಿತಿಯು ಅನುಮೋದನೆ ನೀಡಿದ್ದು, ಅವುಗಳಿಗೆ ಜಾಬ್‌ಕೋಡ್ ಪಡೆದುಕೊಳ್ಳಲಾಗಿದೆಯೇ? ಹಾಗೂ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲಾಗಿದೆಯೇ,* ಕೈಗೊಳ್ಳಲಾಗಿದ್ದರೆ ಟೆಂಡರ್ ಪ್ರಕ್ರಿಯೆ ಯಾವ ಹಂತದಲ್ಲಿದೆ ಎಂಬ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸುತ್ತಾ, ಟೆಂಡರ್ ಪ್ರಕ್ರಿಯೆಯನ್ನು ಆದಷ್ಟು ಬೇಗ ಪೂರ್ಣಗೊಳಿಸುವಂತೆ ಸೂಚಿಸಿದರು.

*ಪಿ.ಓ.ಡಬ್ಲ್ಯೂ ಕಾರ್ಯಕ್ರಮ ಪಟ್ಟಿಯಲ್ಲಿ ಯಾವ ಯಾವ ಕೆರೆಗಳು ಪ್ರಗತಿಯಲ್ಲಿವೆ ಎಂಬ ಬಗ್ಗೆ ಮೂರು ದಿನಗಳೊಳಗೆ ವರದಿಯನ್ನು ಸಮಿತಿಗೆ ನೀಡುವಂತೆ ಹಾಗೂ ವರದಿ ಬಂದ ನಂತರ ಸಮಿತಿ ವತಿಯಿಂದ ಕೆರೆಗಳ ತಪಾಸಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದೆಂದು ಸೂಚಿಸಿದರು. ಕೆರೆಗಳನ್ನು ಅಭಿವೃದ್ಧಿಗೊಳಿಸಿ ಹಣ ಪಾವತಿಗಾಗಿ ಬಾಕಿ ಇರುವ ಬಿಲ್‌ಗಳ ವಿವರಗಳನ್ನು ಸಮಿತಿಗೆ ಒದಗಿಸುವಂತೆ ತಿಳಿಸಿದರು.*

*ಅಧ್ಯಕ್ಷರು* ನಗರವ್ಯಾಪ್ತಿ ಅರಣ್ಯೀಕರಣ ಮತ್ತು ಪರಿಸರ ನಿರ್ವಹಣೆ**ಗೆ** ಸಂಬಂಧಪಟ್ಟಂತೆ ಮಾತನಾಡುತ್ತಾ, *ಯಾವ ಯಾವ ವಾರ್ಡ್‌ಗಳಲ್ಲಿ ಎಷ್ಟೆಷ್ಟು ಮರಗಳನ್ನು ತೆಗೆಯಲಾಗಿದೆ ಎಂಬುದರ ವಿವರಗಳನ್ನು ಪ್ರತಿ ತಿಂಗಳಿಗೊಮ್ಮೆ ಸಮಿತಿಯು ಕೇಳಿರುವ ನಮೂನೆಯಲ್ಲಿ ಮಾಹಿತಿಯನ್ನು ಒದಗಿಸುವಂತೆ ಹಿಂದಿನ ಸಭೆಯಲ್ಲಿ ಸೂಚಿಸಲಾಗಿತ್ತು. ಅದರೆ, ಇಲ್ಲಿಯವರೆಗೆ ಸಮಿತಿಗೆ ಯಾವುದೇ ಮಾಹಿತಿ ಒದಗಿಸದೇ ಅಧಿಕಾರಿಗಳು ನಿರ್ಲಕ್ಷ್ಯ ತೋರಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.*

2013–14ನೇ ಸಾಲಿನ ಆಯವ್ಯಯದಲ್ಲಿ ಉದ್ಯಾನವನಗಳ ನಿರ್ವಹಣೆಗೆ ಸಂಬಂಧಪಟ್ಟಂತೆ ಸಮಿತಿಯು, *ದಿನಾಂಕ:09–10–2013 ರಂದು ಎಂಟು ವಲಯಗಳಿಗೆ ಹಂಚಿಕೆ ಮಾಡಿರುವ ಅನುದಾನಕ್ಕೆ ಕಾರ್ಯಕ್ರಮ ಪಟ್ಟಿಯನ್ನು ತಯಾರಿಸಿ ಸಮಿತಿಯ* ಅನುಮೋದನೆ ಪಡೆಯುವಂತೆ ನಿರ್ಣಯ ತೆಗೆದುಕೊಂಡಿರುತ್ತದೆ. ಆದರೆ, ಎರಡು ತಿಂಗಳು ಕಳೆದರೂ ಸಹ ಸಮಿತಿಯ ಅನುಮೋದನೆಗೆ ಯಾವುದೇ ಕಾರ್ಯಕ್ರಮ ಪಟ್ಟಿಯನ್ನು ಮಂಡಿಸಿರುವುದಿಲ್ಲವೆಂದು ವಿಷಾದ ವ್ಯಕ್ತಪಡಿಸಿದರು. ಇದೇ ರೀತಿ ಮುಂದುವರೆದರೆ ಹಂಚಿಕೆ ಮಾಡಿರುವ ಅನುದಾನವನ್ನು ಇತರೇ ಕಾಮಗಾರಿಗಳಿಗೆ ಬಳಸಿಕೊಳ್ಳಲಾಗುವುದೆಂದು ಎಚ್ಚರಿಕೆ ನೀಡಿದರು.

*ಪಾಲಿಕೆಯಲ್ಲಿ ಬರುವ ಉದ್ಯಾನವನಗಳ ನಿರ್ವಹಣೆ ಬಿಲ್‌ಗಳನ್ನು ಯಾವ ದಿನಾಂಕದವರೆಗೆ ನೀಡಲಾಗಿದೆ. ಅದಕ್ಕೆ ಸಮಿತಿ ಹಾಗೂ ಮಾನ್ಯ ಆಯುಕ್ತರು ಯಾವ ದಿನಾಂಕದವರೆಗೆ ಅನುಮೋದನೆ ನೀಡಿರುತ್ತಾರೆ ಎಂಬ ಬಗ್ಗೆ ಚರ್ಚಿಸಿದರು. ಉದ್ಯಾನವನಗಳ ನಿರ್ವಹಣೆಗಾಗಿ ಆದಷ್ಟು ಬೇಗ ಟೆಂಡರ್ ಕರೆಯಬೇಕು ಎಂದು ಸೂಚಿಸಿದರು. ಟೆಂಡರ್ ಕರೆಯುವವರೆಗೆ ಹಾಲಿ ಇರುವ ಟೆಂಡರ್‌ದಾರರೇ ನಿರ್ವಹಣೆ ಕಾರ್ಯವನ್ನು ಮುಂದುವರೆಸಿಕೊಂಡು ಹೋಗುವಂತೆ ಆದೇಶವಾಗಿರುವುದರಿಂದ ಬಿಲ್‌ಗಳು ಸುಗಮವಾಗಿ ಪಾವತಿಯಾಗುತ್ತಿರುವುದರಿಂದ ಟೆಂಡರ್‌ನ್ನು ಕರೆಯಲು ವಿಳಂಬ ಮಾಡುತ್ತಿರುವ ಬಗ್ಗೆ ಚರ್ಚಿಸಿ ಟೆಂಡರ್‌ನ್ನು ನಿಗಧಿತ ಅವಧಿಯಲ್ಲಿಯೇ ಕರೆಯುವಂತೆ ಎಚ್ಚರಿಕೆ ನೀಡಿದರು.*

*ಸಮಿತಿಯಲ್ಲಿ ನಡೆಸುವ ಸಭೆಗಳಿಗೆ ಎಲ್ಲಾ ಅಧಿಕಾರಿಗಳು ಕಡ್ಡಾಯವಾಗಿ ಹಾಜರಾಗುವಂತೆ ಹಾಗೂ ಸಭೆಗಳಿಗೆ ಹಾಜರಾಗದೆ ನಿರ್ಲಕ್ಷ್ಯ ತೋರಿಸುವ ಅಧಿಕಾರಿಗಳ ವಿರುದ್ಧ ಕ್ರಮ ವಹಿಸಲಾಗುವುದೆಂದು ಸೂಚಿಸಿದರು.*

ಸಮಿತಿಯ ಮುಂದಿರುವ ವಿಷಯಗಳ ಬಗ್ಗೆ ಅಧ್ಯಕ್ಷರು, ಸಮಿತಿಯ ಸದಸ್ಯರು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ, ಈ ಕೆಳಕಂಡಂತೆ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು.

## 1. ವಿಷಯದ ಸಂಖ್ಯೆ:ತೋ/ಸ್ಥಾ/ಸ/04/13-14, ದಿನಾಂಕ: 20-09-2013

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ 55 ಕೆರೆಗಳಿದ್ದು, 30 ಕೆರೆಗಳನ್ನು ಪಾಲಿಕೆಯ ವತಿಯಿಂದ ಈಗಾಗಲೇ ಅಭಿವೃದ್ಧಿಪಡಿಸಿದ್ದು, ಉಳಿದ 25 ಕೆರೆಗಳ ಅಭಿವೃದ್ಧಿಯ ಕಾರ್ಯ ವಿವಿಧ ಹಂತದ ಪ್ರಗತಿಯಲ್ಲಿದೆ. ಈಗಾಗಲೇ ಅಭಿವೃದ್ಧಿಪಡಿಸಲಾಗಿರುವ ಕೆರೆಗಳ ಸಂರಕ್ಷಣೆ ಮತ್ತು ಕೆರೆಯ ಸ್ವತ್ತನ್ನು ಕಾಪಾಡಲು ಹಾಗೂ ನಿರ್ವಹಣೆ ಮಾಡಲು ಕೆಳಕಂಡ ಕಾರ್ಯಗಳನ್ನು ಕೈಗೊಳ್ಳುವುದು ಅತ್ಯಾವಶ್ಯಕವಾಗಿರುತ್ತದೆ.

1) ಕೆರೆಗಳ ಸಂರಕ್ಷಣೆ ಮತ್ತು ಕೆರೆಯ ಸ್ವತ್ತನ್ನು ಕಾಪಾಡಲು ಹಾಗೂ ಯಾವುದೇ ರೀತಿಯ ಕಾನೂನು ಬಾಹಿರ ಘಟನೆಗಳು ನಡೆಯದಂತೆ ತಡೆಯಲು ಕೆರೆಯಲ್ಲಿ ಮೀನು ಹಿಡಿಯುವುದನ್ನು ತಡೆಗಟ್ಟಲು ಹಾಗೂ ಬಿ.ಬಿ.ಎಂ.ಪಿ. ನಿಗಧಿಪಡಿಸಿರುವ ವೇಳೆಯಲ್ಲಿ ಮಾತ್ರ ಸಾರ್ವಜನಿಕರಿಗೆ ಉಚಿತ ಪ್ರವೇಶ ನೀಡಲು, ಕಾವಲುಗಾರರ ಸೇವೆಯನ್ನು ದಿನದ 24 ಗಂಟೆಗಳಿಗೂ ನೇಮಿಸುವುದು.
2) ಸಾರ್ವಜನಿಕರು ಕೆರೆಯ ಒಳಗೆ ತ್ಯಾಜ್ಯ ವಸ್ತುಗಳನ್ನು ತಂದು ಹಾಕದಂತೆ ಹಾಗೂ ಒಂದು ಪಕ್ಷ ತ್ಯಾಜ್ಯ ವಸ್ತುಗಳು ಕೆರೆಯಲ್ಲಿ ಬಂದಲ್ಲಿ ಅವುಗಳನ್ನು ಒಂದು ಜಾಗದಲ್ಲಿ ಸಂಗ್ರಹಿಸಿ ನಾಶ ಮಾಡುವುದು.
3) ಕೆರೆಯಲ್ಲಿನ ಏರಿ, ಕಲ್ಯಾಣಿ, ವೆಟ್‌ಲ್ಯಾಂಡ್, ಸೆಡಿಮೇಂಟೇಷನ್ ಟ್ಯಾಂಕ್‌ನಲ್ಲಿ ಬೆಳೆಯುವ ಗಿಡಗಂಟೆಗಳನ್ನು ಮತ್ತು ಮತ್ತಿತರ ಕಳೆಗಳನ್ನು ಆಗಿಂದಾಗ್ಗೆ ತೆಗೆದು ಹಾಕುವುದು.
4) ಕೆರೆಗಳಲ್ಲಿ ಅಳವಡಿಸಿರುವ ವಿದ್ಯುತ್ ದೀಪಗಳನ್ನು ಕಾಲಕಾಲಕ್ಕೆ ಪರಿಶೀಲಿಸಿ, ದುರಸ್ಥಿಪಡಿಸುವುದು.
5) ಕೆರೆಗಳಲ್ಲಿನ ಪಾದಚಾರಿ ಮಾರ್ಗಗಳಲ್ಲಿ ಕಸ ಗುಡಿಸುವುದು, ಸ್ವಚ್ಛತೆಯನ್ನು ಕಾಪಾಡುವುದು, ಅಂಗಳದಲ್ಲಿನ ಮರ-ಗಿಡಗಳಿಗೆ ನೀರುಣಿಸುವುದು, ಇತ್ಯಾದಿ.
6) ಕೆರೆಯ ಅಂಗಳದಲ್ಲಿರುವ ಸಾರ್ವಜನಿಕ ಶೌಚಾಲಯಗಳ ಸ್ವಚ್ಛತೆಯನ್ನು ಕಾಪಾಡುವುದು ಹಾಗೂ ನಿರ್ವಹಿಸುವುದು.

7) ಕೆರೆಯ ಅಂಗಳದಲ್ಲಿ ಮಕ್ಕಳ ಆಟಿಕೆಯ ಸರಂಜಾಮುಗಳನ್ನು ಅಳವಡಿಸಿದ್ದರೆ ಅವುಗಳು ಹಾಳಾದ ಪಕ್ಷದಲ್ಲಿ ಸರಿಪಡಿಸಲು ಕ್ರಮ ಜರುಗಿಸುವುದು.
8) ಕೆರೆಗಳಿಗೆ ಕಲುಷಿತ ನೀರು ಹರಿಯುವುದನ್ನು ತಡೆಯುವುದು.
9) ಕೆರೆಗಳ ಅಂಗಳದಲ್ಲಿ ಕಾರಂಜಿ/ದೀಪದ ಕಾರಂಜಿ ಅಳವಡಿಸಿದ್ದರೆ ಅವುಗಳ ದುರಸ್ಥಿಗೆ ಬಂದಲ್ಲಿ ಅವುಗಳನ್ನು ಸರಿಪಡಿಸುವುದು.
10) ಕೆರೆಗಳ ನಿರ್ವಹಣೆಯಲ್ಲಿ ಬಳಸಿಕೊಳ್ಳುವ ವಿದ್ಯುತ್ಛಕ್ತಿ ಮತ್ತು ನೀರಿನ ವೆಚ್ಚವನ್ನು ಬಿ.ಬಿ.ಎಂ.ಪಿ.ಯಿಂದ ಪಾವತಿಸುವುದು.
11) ಕೆರೆಗಳ ಅಂಗಳದಲ್ಲಿ ಕಲ್ಯಾಣಿ ನಿರ್ಮಿಸಿದ್ದರೆ ಹಬ್ಬಗಳ ಸಮಯದಲ್ಲಿ ಇವುಗಳ ನಿರ್ವಹಣೆ ಮಾಡುವುದು.

ಈ ಎಲ್ಲಾ ಕಾರ್ಯಗಳನ್ನು ಬಿ.ಬಿ.ಎಂ.ಪಿ.ಯಿಂದ ನಿರ್ವಹಿಸಲು ಕೆರೆಗಳ ವಿಸ್ತರಣೆಯಾನುಸಾರ ಒಂದು ವರ್ಷಕ್ಕೆ ಅಂದಾಜು ರೂ.10.00 ಲಕ್ಷದಿಂದ ರೂ.900.00 ಲಕ್ಷದವರೆಗೂ ವೆಚ್ಚವಾಗುತ್ತದೆ. ಅಭಿವೃದ್ಧಿಪಡಿಸಿದ ಕೆರೆಗಳನ್ನು ಹಾಗೂ ಕೆರೆಗಳಲ್ಲಿನ ಸುತ್ತಮುತ್ತಲಿನ ಉದ್ಯಾನವನವು ಸಹ ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿದ್ದು ಅದರ ನಿರ್ವಹಣೆಯು ಕೂಡ ಬಿ.ಬಿ.ಎಂ.ಪಿ. ವತಿಯಿಂದಲೇ ನಿರ್ವಹಿಸುತ್ತಿದ್ದರೆ ಅವುಗಳ ನಿರ್ವಹಣೆಗಾಗಿ ಮೇಲೆ ತಿಳಿಸಿರುವ ಕೆಲಸಗಳನ್ನು ಪೂರ್ಣವಾಗಿ ಅಥವ ಭಾಗಶಃ ಕೆಲಸಗಳನ್ನು ನಿರ್ವಹಿಸಲು ಯಾವುದೇ ಸಾಮಾಜಿಕ ಕಳಕಳಿ ಹೊಂದಿರುವ ಸಂಘ–ಸಂಸ್ಥೆಗಳು / ಸರ್ಕಾರೇತರ ಸಂಸ್ಥೆಗಳು / ಸ್ಥಳೀಯ ನಾಗರೀಕ ಸಂಘಗಳು / ಕಾರ್ಪೋರೇಟ್ ಸಂಸ್ಥೆಗಳು ಅಥವಾ ಸ್ವಯಂ ಪ್ರೇರಿತವಾಗಿ ಜಂಟಿ ಸಂಸ್ಥೆಗಳು ಮುಂದೆ ಬಂದರೆ ಅವರೊಂದಿಗೆ ಕೆಳಕಂಡ ಷರತ್ತಿನೊಂದಿಗೆ ಒಡಂಬಡಿಕೆ (MOU) ಮಾಡಿಕೊಳ್ಳುವುದರಿಂದ ಪಾಲಿಕೆಗೆ ಪ್ರತಿ ಕೆರೆಗೆ ವಿಸ್ತರಣೆಯಾನುಸಾರ ಕನಿಷ್ಟ ರೂ.10.00 ಲಕ್ಷದಿಂದ ಗರಿಷ್ಟ ರೂ.90.00 ಲಕ್ಷದಂತೆ ಕೆರೆಗಳ ನಿರ್ವಹಣೆ ಮೊತ್ತದ ಹೊರೆ ಕಡಿಮೆಯಾಗುತ್ತದೆ.

ಈ ಹಿನ್ನೆಲೆಯಲ್ಲಿ ಯಾವುದೇ ಸಂಘ–ಸಂಸ್ಥೆಗಳು / ಸರ್ಕಾರೇತರ ಸಂಸ್ಥೆಗಳು / ಸ್ಥಳೀಯ ನಾಗರೀಕ ಸಂಘಗಳು / ಕಾರ್ಪೋರೇಟ್ ಸಂಸ್ಥೆಗಳು ಅಥವಾ ಸ್ವಯಂ ಪ್ರೇರಿತವಾಗಿ ಜಂಟಿ ಸಂಸ್ಥೆಗಳು ಕೆರೆಗಳ ಹಾಗೂ ಉದ್ಯಾನವನಗಳಲ್ಲಿನ ಮೇಲ್ವಿಚಾರಣೆಯನ್ನು ನಿರ್ವಹಿಸಲು ಮುಂದೆ ಬಂದಲ್ಲಿ ಸದರಿ ಸಂಸ್ಥೆಗಳೊಂದಿಗೆ ಕೆಳಕಂಡ ಷರತ್ತುಗಳೊಂದಿಗೆ ಜಂಟಿ ಒಡಂಬಡಿಕೆ (MOU) ಮಾಡಿಕೊಳ್ಳಬಹುದಾಗಿದೆ.

1. ಈ ಒಡಂಬಡಿಕೆಯ ಅನುಮತಿಯು ಸ್ಥಳದ ಸ್ವಾಮಿತ್ವ, ಭೋಗ್ಯ ಅಥವಾ ಮತ್ತಾವುದೇ ಅಧಿಕಾರಕ್ಕೆ ಒಳಪಡುವುದಿಲ್ಲ.
2. ಒಡಂಬಡಿಕೆಯಲ್ಲಿರುವ ಉದ್ದೇಶಗಳನ್ನು ಯಾರಿಗೂ ಹಸ್ತಾಂತರಿಸಬಾರದು ಹಾಗೂ ಒಡಂಬಡಿಕೆಯಲ್ಲಿರುವ ಉದ್ದೇಶಗಳನ್ನು ಯಾವ ಕಾರಣಕ್ಕಾಗಿ ನೀಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಮಾತ್ರ ಬಳಸಿಕೊಳ್ಳುವುದು.
3. ಕೆರೆಯಲ್ಲಿ ಹಾಗೂ ಕೆರೆಗೆ ಹೊಂದಿಕೊಂಡಿರುವ ಉದ್ಯಾನವನದಲ್ಲಿ ಸಾಕುಪ್ರಾಣಿಗಳ ಪ್ರವೇಶ, ಅನುಚಿತ ಚಟುವಟಿಕೆಗಳು, ಕೆರೆಯಲ್ಲಿ ಈಜಾಡುವುದು, ಮೀನು ಹಿಡಿಯುವುದು ಅಥವಾ ನೀರಿನಲ್ಲಿ ಆಟವಾಡುವುದನ್ನು ನಿಷೇಧಿಸಿದೆ.
4. ಕೆರೆಯ ಮತ್ತು ಕೆರೆಗೆ ಹೊಂದಿಕೊಂಡಿರುವ ಉದ್ಯಾನವನದಲ್ಲಿ ತಿನ್ನುವ ಪದಾರ್ಥವನ್ನು ತರುವುದು ಹಾಗೂ ಒಳಗೆ ವ್ಯಾಪಾರ ಮಾಡುವುದನ್ನು ನಿಷೇಧಿಸಿದೆ.
5. ಒಡಂಬಡಿಕೆದಾರರು ಯಾವುದೇ ರೀತಿಯ ಜಾಹೀರಾತು ಪ್ರದರ್ಶಿಸಬೇಕಾದಲ್ಲಿ, 1.5X1.5 ಅಡಿಯ Signage Board ಮತ್ತು ಲೋಗೋ ಪ್ರದರ್ಶನ ಸ್ಥಳವನ್ನು ಆಯುಕ್ತರು ಅಥವಾ ಅವರಿಂದ

ಅಧಿಕಾರ ಪಡೆದ ಅಧಿಕಾರಿಗಳಿಂದ ಅನುಮೋದನೆ ಪಡೆದು ಕೆರೆಯ ಉದ್ಯಾನವನದಲ್ಲಿ ಪ್ರದರ್ಶಿಸುವುದು.

6. ಬಿ.ಬಿ.ಎಂ.ಪಿ. ನಿಗಧಿಪಡಿಸಿದ ವೇಳೆಗಳಲ್ಲಿ ಮಾತ್ರ ಸಾರ್ವಜನಿಕರಿಗೆ ಉಚಿತ ಪ್ರವೇಶ ನೀಡುವುದು.
7. ಕೆರೆಯ ಮತ್ತು ಉದ್ಯಾನವನದ Landscape ವಿನ್ಯಾಸ ಮತ್ತು ಅದನ್ನು ಅನುಷ್ಠಾನ ಮಾಡುವ ಪಕ್ಷದಲ್ಲಿ ಆಯುಕ್ತರು ಅಥವಾ ಅವರಿಂದ ಅಧಿಕಾರ ಪಡೆದ ಅಧಿಕಾರಿಗಳಿಂದ ಅನುಮೋದನೆ ಪಡೆಯುವುದು.
8. ಕೆರೆಯ ಮತ್ತು ಉದ್ಯಾನವನದ ನಿರ್ವಹಣೆಯ ಅವಧಿಯಲ್ಲಿ ಬಿ.ಬಿ.ಎಂ.ಪಿ. ವಿಧಿಸುವ ಯಾವುದೇ ರೀತಿಯ ಷರತ್ತುಗಳು/ನಿರ್ಬಂಧನೆ, ಆದೇಶಗಳು ಮತ್ತು ನಿರ್ದೇಶನಗಳನ್ನು ಪಾಲಿಸುವುದು.
9. ಕೆರೆಯ ಮತ್ತು ಉದ್ಯಾನವನದ ನಿರ್ವಹಣೆಯ ಅವಧಿಯಲ್ಲಿ ಬಿ.ಬಿ.ಎಂ.ಪಿ. ಅಧಿಕಾರಿಗಳು ಯಾವುದೇ ಸಮಯದಲ್ಲಿ ಜಂಟಿ ತಪಾಸಣೆಯನ್ನು ನಡೆಸಿದಾಗ ಸೂಚಿಸುವ ಅಂಶಗಳನ್ನು ಜಾರಿಗೆ ತರುವುದು.
10. ಕೆರೆಯ ಅವರಣದಲ್ಲಿ ಯಾವುದೇ ಲಾಭದಾಯಕ ಚಟುವಟಿಕೆಗಳನ್ನು ನಡೆಸಬಾರದು.
11. ಪಾಲಿಕೆಯು ಯಾವುದೇ ಸಮಯದಲ್ಲಿ ಸಂಸ್ಥೆಯನ್ನು ನಿರ್ವಹಣೆಯಿಂದ ಬಿಡುಗಡೆಗೊಳಿಸಬಹುದು.
12. ಸಂಸ್ಥೆಯವರು ನೇಮಿಸಿಕೊಳ್ಳುವ ಸಿಬ್ಬಂದಿಯ ವೇತನ, ಜೀವವಿಮೆ, ಇ.ಎಸ್.ಐ. ಹಾಗೂ ಇತರೇ ಎಲ್ಲಾ ಖರ್ಚು ವೆಚ್ಚಗಳಿಗೆ ಸಂಸ್ಥೆಯೇ ಜವಾಬ್ದಾರಿಯಾಗಿರುತ್ತದೆ.

ಮುಂದುವರೆಯುತ್ತಾ, ಯಾವುದೇ ಸಂಘ–ಸಂಸ್ಥೆಗಳು / ಸರ್ಕಾರೇತರ ಸಂಸ್ಥೆಗಳು / ಸ್ಥಳೀಯ ನಾಗರೀಕ ಸಂಘಗಳು / ಕಾರ್ಪೋರೇಟ್ ಸಂಸ್ಥೆಗಳು ಅಥವಾ ಸ್ವಯಂ ಪ್ರೇರಿತವಾಗಿ ಜಂಟಿ ಸಂಸ್ಥೆಗಳು ಸಾರ್ವಜನಿಕ ಸಾಮಾಜಿಕ ಹಾಗೂ ಪರಿಸರ ಸಂರಕ್ಷಣೆಯ ಬಗ್ಗೆ ಕಳಕಳಿ ಹೊಂದಿ ಯಾವುದೇ ಆರ್ಥಿಕ ಪ್ರತಿಫಲಾಪೇಕ್ಷೆಯನ್ನು ಬಯಸದೆ ಕೆರೆಗಳ ಸಂರಕ್ಷಣೆಗೆ ಮುಂದೆ ಬಂದರೆ ಮೂರು ವರ್ಷದ ಅವಧಿಯವರೆಗೆ ಮೇಲೆ ತಿಳಿಸಿರುವ ಷರತ್ತುಗಳಿಗೆ ಒಡಂಬಡಿಕೆ ಮಾಡಿಕೊಳ್ಳಲು ಅನುಮೋದನೆಗಾಗಿ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ಆಯುಕ್ತರವರ ದಿನಾಂಕ: 01–08–2013 ರ ಟಿಪ್ಪಣಿ.

**<u>ನಿರ್ಣಯ</u>:– ಮಾನ್ಯ ಆಯುಕ್ತರವರ ದಿನಾಂಕ:01–08–2013 ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

**2. <u>ವಿಷಯದ ಸಂಖ್ಯೆ:ತೋ/ಸ್ಥಾ/ಸ/05/13–14, ದಿನಾಂಕ: 25–09–2013</u>**

ವಾರ್ಡ್ ನಂ.90 ರಲ್ಲಿ ಬರುವ ಹಲಸೂರು ಕೆರೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಅಭಿವೃದ್ಧಿಪಡಿಸಿದ್ದು, ಸದರಿ ಕೆರೆಯಲ್ಲಿ ಸಾರ್ವಜನಿಕರು ಯಾವುದೇ ತೊಂದರೆಯಾಗದಂತೆ ವಾಯುವಿಹಾರ ಮಾಡಲು ಪಾದಚಾರಿ ಮಾರ್ಗಗಳನ್ನು ನಿರ್ಮಿಸಲಾಗಿರುತ್ತದೆ ಹಾಗೂ ಸದರಿ ಕೆರೆಯ ರಕ್ಷಣೆಗಾಗಿ ರಕ್ಷಣಾ ಸಿಬ್ಬಂದಿಗಳನ್ನು ನಿಯೋಜಿಸಿದ್ದು, ಕೆರೆಯ ನಿರ್ವಹಣೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯೇ ನಿರ್ವಹಿಸುತ್ತಿರುತ್ತದೆ.

RMZ Corp ಸಂಸ್ಥೆಯವರು, ಕೆರೆಯ ಅಂಗಳದ ಉದ್ಯಾನವನದಲ್ಲಿ ಸಾರ್ವಜನಿಕರಿಗೆ ಆರೋಗ್ಯಕರ ವಾತಾವರಣವನ್ನು ಸೃಷ್ಠಿಸುವ ಸಲುವಾಗಿ ಹಾಗೂ ವಾಯು ವಿಹಾರದ ಜೊತೆಗೆ ವ್ಯಾಯಾಮಗಳನ್ನು ಮಾಡಲು ಸಹ ಅನುಕೂಲವಾಗುವಂತೆ ಸಂಸ್ಥೆಯ ವೆಚ್ಚದಲ್ಲಿ ಸಾರ್ವಜನಿಕರ ಉಪಯೋಗಕ್ಕಾಗಿ ವಿನೂತನ ಮಾದರಿಯ ವ್ಯಾಯಾಮ ಉಪಕರಣಗಳನ್ನು Istanbul Turkey

ಯಿಂದ ಅಮದು ಮಾಡಿಕೊಂಡು ಸದರಿ ಕೆರೆಯ ಅಂಗಳದಲ್ಲಿ ಅಳವಡಿಸಲು ಮತ್ತು ವ್ಯಾಯಾಮ ಉಪಕರಣಗಳನ್ನು ಅಳವಡಿಸುವ ಸ್ಥಳದಲ್ಲಿ "RMZ Corp Park" ಎಂಬ ನಾಮಫಲಕವನ್ನು ಪ್ರದರ್ಶಿಸುವುದಾಗಿ ಹಾಗೂ ಉದ್ಯಾನವನದ ವ್ಯಾಪ್ತಿಯಲ್ಲಿ ಸಂಸ್ಥೆಯ ನಾಮಫಲಕಗಳ ಪ್ರದರ್ಶನಕ್ಕಾಗಿ ಅನುಮತಿಯನ್ನು ಕೋರಿರುತ್ತಾರೆ.

ತದನಂತರ, ಸಂಸ್ಥೆಯವರು ಅಳವಡಿಸುವ ಉಪಕರಣಗಳ ಸಂರಕ್ಷಣೆ ಮತ್ತು ದೀರ್ಘ ಬಾಳಿಕೆಯ ಹಿತದೃಷ್ಠಿಯಿಂದ ಉಪಕರಣಗಳ ಮೇಲು ಉಸ್ತುವಾರಿಯನ್ನು ಬಿ.ಬಿ.ಎಂ.ಪಿ. ವತಿಯಿಂದಲೇ ನಿರ್ವಹಿಸಲು ಕೋರಿದ್ದು, ಸದರಿ ಸಂಸ್ಥೆಯವರಿಗೆ ಹಲಸೂರು ಕೆರೆಯಲ್ಲಿ ವ್ಯಾಯಾಮ ಉಪಕರಣಗಳನ್ನು ಅಳವಡಿಸಲು ಕೆಲವು ನಿಬಂಧನೆಗಳೊಂದಿಗೆ ಅನುಮತಿಯನ್ನು ನೀಡಲು ಮತ್ತು ಸದರಿ ವ್ಯಾಯಾಮ ಉಪಕರಣಗಳ ನಿರ್ವಹಣೆ ಮೇಲು ಉಸ್ತುವಾರಿಯನ್ನು ನೋಡಿಕೊಳ್ಳಲು ಶಿಕ್ಷಣ ಇಲಾಖೆ, ದೈಹಿಕ ಶಿಕ್ಷಣ ಅಧಿಕಾರಿಗಳು, ಬಿ.ಬಿ.ಎಂ.ಪಿ. ರವರಿಗೆ ನೀಡಲು ಮುಖ್ಯ ಅಭಿಯಂತರು, ಕೆರೆಗಳು ವಿಭಾಗದಿಂದ ಕಡತವನ್ನು ಮಂಡಿಸಿದ್ದು, ಸದರಿ ಕಡತದ ಟಿಪ್ಪಣಿ ಹಾಳೆಯ ಪುಟ ಸಂ.3 ರ ಕಂಡಿಕೆ (11)ರಲ್ಲಿ ಇದನ್ನು ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ.ರವರು ಅನುಮೋದಿಸಿರುತ್ತಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಈ ಕೆಳಕಂಡ ನಿಬಂಧನೆಗಳೊಂದಿಗೆ RMZ Corp ಸಂಸ್ಥೆಯವರಿಗೆ ವ್ಯಾಯಾಮ ಉಪಕರಣಗಳನ್ನು ಹಲಸೂರು ಕೆರೆಯ ಅಂಗಳದಲ್ಲಿ ಅಳವಡಿಸಲು ಅನುಮೋದನೆಯನ್ನು ನೀಡಬಹುದಾಗಿರುತ್ತದೆ.

**<u>ನಿಬಂಧನೆಗಳು:-</u>**

1. ಹಲಸೂರು ಕೆರೆಯ ಉದ್ಯಾನವನದ ಹಕ್ಕು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುತ್ತದೆ.
2. ವಿವಿಧ ನಮೂನೆಯ ವ್ಯಾಯಾಮ ಉಪಕರಣಗಳನ್ನು ಅಳವಡಿಸುವಾಗ ಹಲಸೂರು ಕೆರೆಗೆ ಹಾಗೂ ಉದ್ಯಾನವನದ ಸ್ವತ್ತಿಗೆ ಯಾವುದೇ ಹಾನಿಯಾಗದಂತೆ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗದಂತೆ ನಿರ್ವಹಣೆ ಮಾಡಬೇಕಾಗಿರುತ್ತದೆ.
3. RMZ Corp ಸಂಸ್ಥೆಯವರ ಪ್ರಾಯೋಜಕರ ಪ್ರದರ್ಶನ ನಾಮಫಲಕವು 1.5x0.5 ಅಡಿಯ ಅಳತೆಗಿಂತ ಹೆಚ್ಚಿರಬಾರದು. ಪ್ರಾಯೋಜಕ ಸಂಸ್ಥೆಯ ನಾಮಫಲಕ ಹಾಗೂ ಲೋಗೋ ಪ್ರದರ್ಶನ ಸ್ಥಳವನ್ನು ಆಯುಕ್ತರು ಅಥವಾ ಅವರಿಂದ ಅಧಿಕಾರ ಪಡೆದ ಅಧಿಕಾರಿಗಳಿಂದ ಅನುಮತಿ ಪಡೆಯಬೇಕು.
4. RMZ Corp ಸಂಸ್ಥೆಯವರು, ಅಳವಡಿಸಿದ ವ್ಯಾಯಾಮ ಉಪಕರಣಗಳನ್ನು ಉಪಯೋಗಿಸುವ ಸೂಚನೆಗಳ ನಾಮಫಲಕ ಅಳವಡಿಸಲು ಸೂಚಿಸಿದೆ ಹಾಗೂ ಅಳವಡಿಸಿದ ವ್ಯಾಯಾಮ ಉಪಕರಣಗಳ ಸ್ಥಳದಲ್ಲಿ ಯಾವುದೇ ತರದ ಛಾವಣಿಯನ್ನು ಅಳವಡಿಸದಿರಲು ಸೂಚಿಸಿದೆ.
5. ಹಲಸೂರು ಕೆರೆಯ ಉದ್ಯಾನವನದಲ್ಲಿ ಅಳವಡಿಸುವ ವ್ಯಾಯಾಮ ಉಪಕರಣಗಳು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸ್ವತ್ತಾಗಿರುತ್ತದೆ.
6. RMZ Corp ಸಂಸ್ಥೆಯವರು ಮಹಾನಗರ ಪಾಲಿಕೆ / ಲಾಂಛನವನ್ನು ಕನ್ನಡ ಮತ್ತು ಅಂಗ್ಲ ಭಾಷೆಯಲ್ಲಿ ಪ್ರಮುಖ ಸ್ಥಳದಲ್ಲಿ ಪ್ರದರ್ಶಿಸತಕ್ಕದ್ದು.

ಮುಂದುವರೆಯುತ್ತಾ, ಮೇಲಿನ ನಿಬಂಧನೆಗಳನ್ನೊಳಗೊಂಡ ಅನುಮತಿ ಪತ್ರದ ಅನುಮೋದನೆಯನ್ನು ಸಕ್ಷಮ ಪ್ರಾಧಿಕಾರವಾದ ತೋಟಗಾರಿಕೆ ಸ್ಥಾಯಿ ಸಮಿತಿಯಿಂದ ಪಡೆಯಬೇಕಾಗಿರುವ ಪ್ರಯುಕ್ತ, ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ **ದಿನಾಂಕ:21-09-2013 ರ ಟಿಪ್ಪಣಿ.**

**<u>ನಿರ್ಣಯ:</u>- ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:21-09-2013ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

3. **<u>ವಿಷಯದ ಸಂಖ್ಯೆ:ತೋ/ಸ್ಥಾ/ಸ/12/13-14, ದಿನಾಂಕ: 13-11-2013</u>**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ರಾಹರಾಜೇಶ್ವರಿನಗರ ವಲಯ ವ್ಯಾಪ್ತಿಯ ವಾರ್ಡ್ ನಂ.38ರ **Providing Pathway Retaining wall and other Development to H.T.Line area Near TVS Cross at peenya 3rd phase at Ward No.** 38ರ ಕಾಮಗಾರಿಯ ಅಂದಾಜು ಮೊತ್ತ ರೂ.72.60 ಲಕ್ಷಗಳಿಗೆ ಕೈಗೊಳ್ಳಲು ಉಲ್ಲೇಖ(1) ರಂತೆ ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಿಸಲಾಗಿತ್ತು. ಇದರಲ್ಲಿ ಐದು(05) ಜನ ಗುತ್ತಿಗೆದಾರರು ಪ್ರತಿಕ್ರಿಯಿಸಿದ್ದು, ಇವರುಗಳಲ್ಲಿ ಮೂರು ಜನ ಗುತ್ತಿಗೆದಾರರು ಇ.ಎಂ.ಡಿ. ಹಂತದಲ್ಲಿ ತಿರಸ್ಕೃತಗೊಂಡಿದ್ದು, ಉಳಿದ ಇಬ್ಬರು ಗುತ್ತಿಗೆದಾರರು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿ ಇವರುಗಳಲ್ಲಿ ಶ್ರೀ.ಡಿ.ಸಿದ್ದೇಗೌಡ, ಗುತ್ತಿಗೆದಾರರು ಕನಿಷ್ಠ ದರದ ಟೆಂಡರ್ ಆಗಿದ್ದು, ಕಾಮಗಾರಿಯ ಮಂಜೂರಾದ ದರದ ಟೆಂಡರ್ ಮೊತ್ತ ರೂ.72.55,893.72 ಗಳಿಗೆ ಶೇಕಡ 7.47ರಷ್ಟು ಕಡಿಮೆ ದರದಲ್ಲಿ ಕಾಮಗಾರಿ ನಿರ್ವಹಿಸಲು ರೂ.67.14.140.36 ಗಳಿಗೆ ಟೆಂಡರ್ ದರ ನಮೂದಿಸಿರುತ್ತಾರೆ.

ದಿನಾಂಕ:19-07-2013 ರಿಂದ 28-08-2013 ವರೆಗೆ ಬೆಂಗಳೂರು ಗ್ರಾಮಾಂತರ ಲೋಕಸಭಾ ಉಪ ಚುನಾವಣೆ ಸಂಹಿತೆ ಜಾರಿಯಲ್ಲಿದ್ದರಿಂದ ಹಾಗೂ ಸ್ಥಾಯಿ ಸಮಿತಿಯು ಪುನರ್ ರಚನೆಯಿಂದಾಗಿ ವಿಳಂಬವಾದ್ದರಿಂದ ಸ್ಥಳೀಯ ಪಾಲಿಕೆ ಸದಸ್ಯರ ಕೋರಿಕೆಯಂತೆ, ಕಾಮಗಾರಿಯನ್ನು ತುರ್ತಾಗಿ ಕೈಗೊಳ್ಳಲು ಮಂಜೂರಾದ ದರಕ್ಕಿಂತ ಶೇಕಡ 7.47 ರಷ್ಟು ಕಡಿಮೆ ಕನಿಷ್ಠ ದರದ ಗುತ್ತಿಗೆದಾರರಿಂದ ಟೆಂಡರ್ ವ್ಯತ್ಯಾಸ ಮೊತ್ತ ಮತ್ತು ಕಾಮಗಾರಿ ಭದ್ರತಾ ಮೊತ್ತಕ್ಕೆ ಬ್ಯಾಂಕ್ ಗ್ಯಾರಂಟಿ ಪಡೆದು ಕಾರ್ಯಾದೇಶ ನೀಡಿ ಕಾಮಗಾರಿ ಪ್ರಾರಂಭಿಸಲಾಗಿರುತ್ತದೆ. ಸದರಿ ಕಾಮಗಾರಿಯು ತೋಟಗಾರಿಕೆ ಸ್ಥಾಯಿ ಸಮಿತಿಗೆ ಸಂಬಂಧಪಟ್ಟಿರುತ್ತದೆ.

ಆದ್ದರಿಂದ, ಮಂಜೂರಾದ ದರಕ್ಕಿಂತ 7.47 ರಷ್ಟು ಕಡಿಮೆ ಕನಿಷ್ಠ ದರ ನಮೂದಿಸಿರುವ ಗುತ್ತಿಗೆದಾರರ ಟೆಂಡರ್ ಸ್ಥಿರೀಕರಣಗೊಳಿಸಲು ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ) ರವರ ದಿನಾಂಕ:07-11-2013 ರ ಟಿಪ್ಪಣಿ.

**<u>ನಿರ್ಣಯ:</u>- ಮಾನ್ಯ ವಿಶೇಷ ಆಯುಕ್ತರು(ಯೋಜನೆ) ರವರ ದಿನಾಂಕ:07-11-2013ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

## 4. <u>ವಿಷಯದ ಸಂಖ್ಯೆ:ತೋ/ಸ್ಥಾ/ಸ/13/13-14, ದಿನಾಂಕ: 19-11-2013</u>

**ಅಂಬಲೀಪುರ** ಕೆಳಗಿನ ಕೆರೆಯ ಹಂತ-2ರ ಅಭಿವೃದ್ಧಿ ಕಾಮಗಾರಿಗೆ ಸಂಬಂಧಿಸಿದಂತೆ, ಕೆ.ಪಿ. ಡಬ್ಲ್ಯೂ.ಡಿ. 2012-13ನೇ ಸಾಲಿನ ದರಪಟ್ಟಿ ಆಧಾರದ ಮೇಲೆ ರೂ.80.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ, ಸಂಖ್ಯೆ: **308-13-000003** ರಂತೆ ಕಾಮಗಾರಿ ಸಂಕೇತವನ್ನು ಪಡೆದು, ಟೆಂಡರ್‌ಗಿಟ್ಟ ಮೊತ್ತ ರೂ.70.10 ಲಕ್ಷಗಳಿಗೆ ಅನುಮೋದನೆಗೊಂಡ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಕಾರ್ಯಪಾಲಕ ಅಭಿಯಂತರರು-1, ಯೋಜನೆ-2 ರವರು ಟೆಂಡರ್ ಪ್ರಕಟಣೆ ಸಂಖ್ಯೆ:ಕಾ.ಅ-1(ಕೆರೆಗಳು)/ಟೆಂಡರ್/01/13-14, ದಿನಾಂಕ: 23-06-2013ರಂದು ಪತ್ರಿಕಾ ಪ್ರಕಟಣೆ ನೀಡಲಾಗಿರುತ್ತದೆ. ಸದರಿ ಟೆಂಡರ್‌ನಲ್ಲಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು, ಒಬ್ಬರು ಗುತ್ತಿಗೆದಾರರು ತಾಂತ್ರಿಕ ಬಿಡ್‌ನಲ್ಲಿ ಸಿಂಧುತ್ವ ಹೊಂದಿದ್ದು, ಸದರಿಯವರು ನಮೂದಿಸಿರುವ ದರಗಳು ಈ ಕೆಳಗಿನಂತಿದೆ.

| | **ಶ್ರೀ.ಕೆ.ದಾಮೋದರ್** |
|---|---|
| ಟೆಂಡರ್‌ಗಿಟ್ಟ ಮೊತ್ತ ರೂ. | ರೂ.70,09,566.55 |
| ನಮೂದಿಸಿರುವ ಮೊತ್ತ ರೂ. | ರೂ.75,14,082.00 |
| ಶೇಕಡವಾರು | 7.20% |
| | 1.1 |

ಕನಿಷ್ಠ ದರ ನಮೂದಿಸಿ ಸಿಂಧುತ್ವ ಹೊಂದಿದ ಗುತ್ತಿಗೆದಾರರಾದ **ಶ್ರೀ.ಕೆ.ದಾಮೋದರ್** ರವರು ಸಂಧಾನದ ನಂತರ ನಮೂದಿಸಿದ್ದ ದರಗಳು ಅನುಮೋದಿತ 2012-13ನೇ ಸಾಲಿನ ಕೆ.ಪಿ.ಡಬ್ಲ್ಯೂ.ಡಿ. ದರಪಟ್ಟಿಗೆ ಹೋಲಿಸಿದಾಗ ಶೇಕಡ 7.00% ಕಡಿಮೆ ದರಗಳಾಗಿದ್ದರಿಂದ, ಸದರಿ ಮೊತ್ತವು ಅನುಮೋದನೆಗೊಂಡ ಮೊತ್ತವಾದ ರೂ.75,00,063.00 (ಎಪ್ಪತ್ತೈದು ಲಕ್ಷದ ಅರವತ್ಮೂರು ರೂಪಾಯಿಗಳು ಮಾತ್ರ) ಕಾರ್ಯಪಾಲಕ ಅಭಿಯಂತರರು ಶಿಫಾರಸ್ಸು ಮಾಡಿರುತ್ತಾರೆ.

ಮೇಲಿನ ಅಂಶಗಳಿಗೆ ಪರಿಶೀಲಿಸಲಾಗಿ, ಟೆಂಡರ್‌ನ ಒಟ್ಟು ಮೊತ್ತವು ರೂ.75,00,063.00 (ಎಪ್ಪತ್ತೈದು ಲಕ್ಷದ ಅರವತ್ಮೂರು ರೂಪಾಯಿಗಳು ಮಾತ್ರ) ಗಳಾಗಿದ್ದು, ಸರ್ಕಾರದ ಆದೇಶದ ಸಂಖ್ಯೆ:ಯು.ಡಿ.ಡಿ./355/ ಎಮ್.ಎಮ್.ಯು.2007(ಪಿ), ದಿನಾಂಕ:08-05-2009 ರ ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ನಿಯಮಗಳು 1977 ನಿಯಮ 6ಕ್ಕೆ ಆರ್ಥಿಕ ಅಧಿಕಾರಗಳ ತಿದ್ದುಪಡಿಯ ಬಾಕಿ ಇಟ್ಟು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹೆಚ್ಚಿನ ಆರ್ಥಿಕ ಅಧಿಕಾರದ ಪ್ರತ್ಯಾಯೋಜನೆಯ ಶಿಫಾರಸ್ಸನ್ನು ಸರ್ಕಾರವು ಅಂಗೀಕರಿಸಿದ್ದು, ಇದರಂತೆ ಟೆಂಡರ್ ಅಂಗೀಕರಿಸುವ ಅಧಿಕಾರವು ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆರವರ ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನಲೆಯಲ್ಲಿ ಮೇಲಿನ ಕಾಮಗಾರಿಯ ಟೆಂಡರ್ ಗುತ್ತಿಗೆದಾರರಾದ **ಶ್ರೀ.ಕೆ.ದಾಮೋದರ್** 2012-13ನೇ ಸಾಲಿನ ಅನುಮೋದಿತ ದರಪಟ್ಟಿಗಿಂತ ಶೇಕಡ 7.00% ಕಡಿಮೆಯಾದ ಮೊತ್ತವು **ರೂ.75,00,063.00(**ಎಪ್ಪತ್ತೈದು ಲಕ್ಷದ ಅರವತ್ಮೂರು ರೂಪಾಯಿಗಳು ಮಾತ್ರ) ಗಳ ಟೆಂಡರ್‌ಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ)ರವರ ದಿನಾಂಕ:18-11-2013 ರ ಟಿಪ್ಪಣಿ.

**<u>ನಿರ್ಣಯ:-</u> ತಪಾಸಣೆಗೆ ಮುಂದೂಡಲಾಗಿದೆ.**

5. **ವಿಷಯದ ಸಂಖ್ಯೆ:ತೋ/ಸ್ಥಾ/ಸ/14/13–14, ದಿನಾಂಕ: 06–12–2013**

ಕೈಗೊಂಡನಹಳ್ಳಿ ಕೆರೆಯಲ್ಲಿ ಕೊಳಚೆನೀರನ್ನು ಕೆರೆಯಿಂದ ಹೊರಹಾಕಲು ತಿರುವುಗಾಲುವೆ ನಿರ್ಮಾಣ ಮಾಡುವ ಕಾಮಗಾರಿಗೆ ಸಂಬಂಧಿಸಿದಂತೆ, ಕೆ.ಪಿ.ಡಬ್ಲ್ಯೂ.ಡಿ. 2012–13ನೇ ಸಾಲಿನ ದರಪಟ್ಟಿ ಆಧಾರದ ಮೇಲೆ ರೂ.115.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ, ಸಂಖ್ಯೆ: **R–308–12–000016**ರಂತೆ ಕಾಮಗಾರಿ ಸಂಕೇತವನ್ನು ಪಡೆದು, ಟೆಂಡರ್‌ಗಿಟ್ಟ ಮೊತ್ತ ರೂ..110.98 ಲಕ್ಷಗಳಿಗೆ ಅನುಮೋದನೆಗೊಂಡ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಕಾರ್ಯಪಾಲಕ ಅಭಿಯಂತರರು–1, ಕೆರೆಗಳು ರವರು ಟೆಂಡರ್ ಪ್ರಕಟಣೆ ಸಂಖ್ಯೆ:ಕಾ.ಅ–1(ಕೆರೆಗಳು)/ಟೆಂಡರ್/02/ 13–14, ದಿನಾಂಕ: 25–07–2013 ರಂದು ಪತ್ರಿಕಾ ಪ್ರಕಟಣೆ ನೀಡಲಾಗಿರುತ್ತದೆ. ಸದರಿ ಟೆಂಡರ್‌ನಲ್ಲಿ ಒಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು, ಸದರಿಯವರು ತಾಂತ್ರಿಕ ಬಿಡ್‌ನಲ್ಲಿ ಸಿಂಧುತ್ವ ಹೊಂದಿದ್ದು, ಸದರಿಯವರು ನಮೂದಿಸಿರುವ ದರಗಳು ಈ ಕೆಳಗಿನಂತಿದೆ.

| | **ಶ್ರೀ.ಕೆ.ದಾಮೋದರ್** |
|---|---|
| ಟೆಂಡರ್‌ಗಿಟ್ಟ ಮೊತ್ತ ರೂ. | 1,10,98,472.05 |
| ನಮೂದಿಸಿರುವ ಮೊತ್ತವನ್ನು 2012–13ನೇ ಸಾಲಿನ ಲೋಕೋಪಯೋಗಿ ಇಲಾಖೆ ದರ ಸೂಚಿಗೆ ತುಲನೆ ಮಾಡಲಾಗಿ (ಶೇಕಡವಾರು) | 1,31,42,251.20 (18.41%) |
| ನಮೂದಿಸಿದ ಮೊತ್ತವನ್ನು 2013–14ನೇ ಸಾಲಿನ ಲೋಕೋಪಯೋಗಿ ಇಲಾಖೆ ದರಸೂಚಿಗೆ ತುಲನೆ ಮಾಡಲಾಗಿ (ಶೇಕಡವಾರು) | 1,15,63,254,71 (4.19%) |
| ದರ ಸಂಧಾನದ ನಂತರದ ಮೊತ್ತ | 1,15,42,894.39 (4.00%) |
| | 1.1 |

ಕನಿಷ್ಠ ದರ ನಮೂದಿಸಿ ಸಿಂಧುತ್ವ ಹೊಂದಿದ ಗುತ್ತಿಗೆದಾರರಾದ **ಶ್ರೀ.ಕೆ.ದಾಮೋದರ್**ರವರು ಸಂಧಾನದ ನಂತರ ನಮೂದಿಸಿದ್ದ ದರಗಳು ಅನುಮೋದಿತ 2012–13ನೇ ಸಾಲಿನ ಕೆ.ಪಿ.ಡಬ್ಲ್ಯೂ.ಡಿ. ದರಪಟ್ಟಿಗೆ ಹೋಲಿಸಿದಾಗ ಶೇಕಡ 4.00% ರಷ್ಟು ಕಡಿಮೆ ದರಗಳಾಗಿದ್ದರಿಂದ, ಸದರಿ ಮೊತ್ತವು ಅನುಮೋದನೆಗೊಂಡ ಮೊತ್ತವಾದ **ರೂ.1,15,42,894.39**(ಒಂದು ಕೋಟಿ, ಹದಿನೈದು ಲಕ್ಷದ ನಲವತ್ತೆರಡು ಸಾವಿರದ ಎಂಟುನೂರ ತೊಂಭತ್ತನಾಲ್ಕು ರೂಪಾಯಿಗಳು ಮೂವತ್ತೊಂಭತ್ತು ಪೈಸೆ ಮಾತ್ರ) ಗಳಿಗೆ ಕಾರ್ಯಪಾಲಕ ಅಭಿಯಂತರರು ಶಿಫಾರಸ್ಸು ಮಾಡಿರುತ್ತಾರೆ.

ಮೇಲಿನ ಅಂಶಗಳನ್ನು ಪರಿಶೀಲಿಸಲಾಗಿ, ಟೆಂಡರ್‌ನ ಒಟ್ಟು ಮೊತ್ತವು **ರೂ.1,15,42,894.39** (ಒಂದು ಕೋಟಿ, ಹದಿನೈದು ಲಕ್ಷದ ನಲವತ್ತೆರಡು ಸಾವಿರದ ಎಂಟುನೂರ ತೊಂಭತ್ತನಾಲ್ಕು ರೂಪಾಯಿಗಳು ಮೂವತ್ತೊಂಭತ್ತು ಪೈಸೆ ಮಾತ್ರ)ಗಳಾಗಿದ್ದು, ಸರ್ಕಾರದ ಆದೇಶದ ಸಂಖ್ಯೆ:ಯು.ಡಿ.ಡಿ./355/ಎಮ್.ಎಮ್.ಯು. 2007(ಪಿ), ದಿನಾಂಕ:08–05–2009ರ ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ನಿಯಮಗಳು 1977 ನಿಯಮ 6ಕ್ಕೆ ಆರ್ಥಿಕ ಅಧಿಕಾರಗಳ ತಿದ್ದುಪಡಿಯ ಬಾಕಿ ಇಟ್ಟು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹೆಚ್ಚಿನ ಆರ್ಥಿಕ ಅಧಿಕಾರದ ಪ್ರತ್ಯಾಯೋಜನೆಯ ಶಿಫಾರಸ್ಸನ್ನು ಸರ್ಕಾರವು ಅಂಗೀಕರಿಸಿದ್ದು, ಇದರಂತೆ ಟೆಂಡರ್ ಅಂಗೀಕರಿಸುವ ಅಧಿಕಾರವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ತೋಟಗಾರಿಕೆ ಸ್ಥಾಯಿ ಸಮಿತಿಯ ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನೆಲೆಯಲ್ಲಿ ಮೇಲಿನ ಕಾಮಗಾರಿಯ ಟೆಂಡರ್ ಗುತ್ತಿಗೆದಾರರಾದ **ಶ್ರೀ.ಕೆ.ದಾಮೋದರ್** 2013–14ನೇ ಸಾಲಿನ ಕೆ.ಪಿ.ಡಬ್ಲ್ಯೂ.ಡಿ. ದರಪಟ್ಟಿಗೆ ಹೋಲಿಸಿದಾಗ ಶೇಕಡ 4.00% ಕಡಿಮೆ ದರಗಳಾಗಿದ್ದರಿಂದ, ಸದರಿ ಮೊತ್ತವು ಅನುಮೋದನೆಗೊಂಡ ಮೊತ್ತವಾದ **ರೂ.1,15,42,894.39** (ಒಂದು ಕೋಟಿ, ಹದಿನೈದು ಲಕ್ಷದ ನಲವತ್ತೆರಡು ಸಾವಿರದ ಎಂಟುನೂರ ತೊಂಭತ್ತನಾಲ್ಕು ರೂಪಾಯಿಗಳು ಮೂವತ್ತೊಂಭತ್ತು ಪೈಸೆ ಮಾತ್ರ) ಗಳ ಟೆಂಟರ್‌ಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ಆಯುಕ್ತರು ರವರ ದಿನಾಂಕ:03–12–2013 ರ ಟಿಪ್ಪಣಿ.

**ನಿರ್ಣಯ:–      ತಪಾಸಣೆಗೆ ಮುಂದೂಡಲಾಗಿದೆ.**

ಕೊನೆಯದಾಗಿ, ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳು ಮೇಲಿನ ವಿಷಯಗಳ ಬಗ್ಗೆ ಚರ್ಚಿಸಿರುವಂತೆ ಕ್ರಮ ವಹಿಸಲು, ಮಾನ್ಯ ಆಯುಕ್ತರು ಕಾರ್ಯಪ್ರವೃತ್ತರಾಗಬೇಕೆಂದು ಕೋರುತ್ತಾ, ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಅಧ್ಯಕ್ಷರು
ತೋಟಗಾರಿಕೆ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ:28–12–2013 ರಂದು ತೋಟಗಾರಿಕೆ ಸ್ಥಾಯಿ ಸಮಿತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಮಿತಿಯ ಮುಂದಿರುವ ವಿಷಯಗಳ ಬಗ್ಗೆ ಚರ್ಚಿಸಿ ನಿರ್ಣಯ ಕೈಗೊಂಡ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರು<br>ಶ್ರೀಯುತರಾದ : | | | ಹಾಜರಿದ್ದ ಅಧಿಕಾರಿಗಳು<br>ಶ್ರೀಯುತರಾದ | |
|---|---|---|---|---|
| 1 | **ಎಂ.ಮುನಿರಾಜು** | ಅಧ್ಯಕ್ಷರು | 1 | ಕೌನ್ಸಿಲ್ ಕಾರ್ಯದರ್ಶಿ |
| 2 | **ಎಸ್.ಹೆಚ್.ಪದ್ಮರಾಜ್** | ಸದಸ್ಯರು | 2 | ತೋಟಗಾರಿಕೆ ಅಧೀಕ್ಷರು(ದಕ್ಷಿಣ–1 ಮತ್ತು 2) |
| 3 | **ಎಂ.ಸಿ.ಶ್ರೀನಿವಾಸ್** | ಸದಸ್ಯರು | 3 | ವಲಯ ಅರಣ್ಯಾಧಿಕಾರಿ(ಯಲಹಂಕ) |
| 4 | **ಆರ್.ಪಿ.ಶಶಿ** | ಸದಸ್ಯರು | 4 | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ಪಶ್ಚಿಮ) |
| 5 | **ಪುಟ್ಟಮ್ಮ** | ಸದಸ್ಯರು | | |
| 6 | **ವಿಜಯ ಎಸ್.ಎಸ್.ಪ್ರಸಾದ್** | ಸದಸ್ಯರು | | |
| 7 | **ಎಸ್.ಗಂಗಾಧರ್** | ಸದಸ್ಯರು | | |
| 8 | **ಕೆ.ಆರ್.ಯಶೋಧಮ್ಮ** | ಸದಸ್ಯರು | | |
| 9 | **ಪಳನಿಯಮ್ಮಾಳ್** | ಸದಸ್ಯರು | | |
| 10 | **ಲಲಿತಾ** | ಸದಸ್ಯರು | | |
| 11 | **ಗೋಪಾಲಕೃಷ್ಣ.ಟಿ** | ಸದಸ್ಯರು | | |

**(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)**

ಮಾನ್ಯ ಅಧ್ಯಕ್ಷರು ಸಭೆಯ ಅಧ್ಯಕ್ಷತೆ ವಹಿಸಿ ಸಭೆಯಲ್ಲಿ ಹಾಜರಿದ್ದ ಸಮಿತಿ ಸದಸ್ಯರು ಹಾಗೂ ಅಧಿಕಾರಿಗಳಿಗೆ ಹೃತ್ಪೂರ್ವಕವಾದ ಸ್ವಾಗತ ಕೋರಿದರು.

ಸಮಿತಿಯ ಮುಂದಿರುವ ವಿಷಯಗಳ ಬಗ್ಗೆ ಅಧ್ಯಕ್ಷರು, ಸಮಿತಿಯ ಸದಸ್ಯರು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ, ಈ ಕೆಳಕಂಡಂತೆ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು.

### 1. ವಿಷಯದ ಸಂಖ್ಯೆ:ತೋ/ಸ್ಥಾ/ಸ/15/13–14, ದಿನಾಂಕ: 21–12–2013

ವಾರ್ಡ್ ನಂ.127 ರಲ್ಲಿ ಬರುವ ಕೈಲಾಸಗಿರಿ ಉದ್ಯಾನವನವನ್ನು ಅಭಿವೃದ್ಧಿಪಡಿಸುವ ಹಾಗೂ ಕೈಲಾಸಗಿರಿ ಉದ್ಯಾನವನಕ್ಕೆ ರೀಟೈನಿಂಗ್ ವಾಲ್ ನಿರ್ಮಾಣ ಮಾಡುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ವಾರ್ಡ್ ನಂ.127ರ ವ್ಯಾಪ್ತಿಯ ಪಂಚಶೀಲನಗರದಲ್ಲಿ ಬರುವ ಕೈಲಾಸಗಿರಿಯ ಪಾಕ್ ಇಳಿಜಾರುವಿನಿಂದ ಕೂಡಿದ್ದು, ಪಾರ್ಕ್ ಇದ್ದರೂ ಸಾರ್ವಜನಿಕರ ಉಪಯೋಗಕ್ಕೆ ಬಾರದೇ ಇರುವ ಸ್ಥಿತಿಯಲ್ಲಿದ್ದರಿಂದ, ಸದರಿ ಉದ್ಯಾನವನವನ್ನು ತಡೆಗೋಡೆ ಹಾಕಿ ಅಭಿವೃದ್ಧಿಪಡಿಸಲು ಕಾರ್ಯಪಾಲಕ ಅಭಿಯಂತರರು, ಗೋವಿಂದರಾಜನಗರ ವಿಭಾಗರವರು ರೂ.141.00 ಲಕ್ಷಗಳಿಗೆ ಅಂದಾಜು ಪಟ್ಟಿಯೊಡನೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ ಮತ್ತು ಸದರಿ ಅಂದಾಜು ಪಟ್ಟಿಗೆ 2013–14ನೇ ಸಾಲಿನ ಲೆಕ್ಕಶೀರ್ಷಿಕೆ ಪಿ.0311 ರಲ್ಲಿ ಉದ್ಯಾನವನ ಅಭಿವೃದ್ಧಿಗಾಗಿ ಮೀಸಲಿರಿಸಿರುವ ರೂ.500.00 ಲಕ್ಷಗಳ ಅನುದಾನದ ಅಡಿಯಲ್ಲಿ ಕಾಮಗಾರಿಗೆ ಅನುಮೋದನೆಯನ್ನು ಕೋರಿರುತ್ತಾರೆ.

2013–14ರ ಅಯವ್ಯಯದ ಪುಸ್ತಕದ ಪುಟ ಸಂಖ್ಯೆ.75 ರಲ್ಲಿ ಪಿ–ಕೋಡ್ ಸಂಖ್ಯೆ:ಪಿ–0311ರ ಅಡಿಯಲ್ಲಿ 500.00ಲಕ್ಷಗಳ ಅನುದಾನ ಲಭ್ಯವಿದ್ದು, ಮೇಲ್ಕಂಡ ಕಾಮಗಾರಿಯನ್ನು ಕೈಗೊಳ್ಳಲು ಮಾನ್ಯ ಆಯುಕ್ತರು ಅನುಮೋದನೆ ನೀಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:20–12–2013 ರ ಟಿಪ್ಪಣಿ.

1. ಪ್ರಸ್ತಾಪಿತ ಕಾಮಗಾರಿಗಳ ಅಂದಾಜುಪಟ್ಟಿಗೆ ಆಡಳಿತಾತ್ಮಕ ಅನುಮೋದನೆ.
2. ಪ್ರಸ್ತಾಪಿತ ಕಾಮಗಾರಿಗಳಿಗೆ 2013–14ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ ಪಿ–0311ರ ಅಡಿಯಲ್ಲಿ ಕಾಯ್ದಿರಿಸಿರುವ ಲೆಕ್ಕಶೀರ್ಷಿಕೆಯಲ್ಲಿ ಜಾಬ್ ಸಂಖ್ಯೆ ನೀಡಲು ಅನುಮೋದನೆ.

**ನಿರ್ಣಯ:– ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:20–12–2013ರ ಟಿಪ್ಪಣಿಯನ್ನು ಭಾಗಶಃ ಒಪ್ಪುತ್ತಾ, ಈ ಕಾಮಗಾರಿಯನ್ನು ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ ಕೆ.ಆರ್.ಐ.ಡಿ.ಎಲ್.ಸಂಸ್ಥೆಯಿಂದ ನಿರ್ವಹಿಸಲು ಸಮಿತಿಯು ತೀರ್ಮಾನಿಸಿತು.**

**2. ವಿಷಯದ ಸಂಖ್ಯೆ:ತೋ/ಸ್ಥಾ/ಸ/16/13–14, ದಿನಾಂಕ: 27–12–2013**

ದಕ್ಷಿಣ ವಲಯ–1 ಮತ್ತು ದಕ್ಷಿಣ ವಲಯ–2ರ ವ್ಯಾಪ್ತಿಗೆ ಬರುವ ಉದ್ಯಾನವನಗಳ ನಿರ್ವಹಣೆ ಕಾರ್ಯಕ್ರಮವನ್ನು 2013–14ನೇ ಸಾಲಿನ ಆಯವ್ಯಯದಲ್ಲಿ ಇರುವ ಅನುದಾನಕ್ಕೆ ಅನುಗುಣವಾಗಿ ಹಾಗೂ ಉಲ್ಲೇಖ–1ರನ್ವಯ ದಕ್ಷಿಣ ವಲಯ–1 ಮತ್ತು ದಕ್ಷಿಣ ವಲಯ–2ಕ್ಕೆ ಹಂಚಿಕೆಯಾಗಿರುವ ರೂ.250.00ಲಕ್ಷಗಳಿಗೆ ಉದ್ಯಾನವನಗಳನ್ನು ನಿರ್ವಹಣೆ ಮಾಡಲು ಅನುದಾನ ಕಾಯ್ದಿರಿಸಿ ಸದರಿ ಕಾರ್ಯಕ್ರಮವನ್ನು ಕೈಗೊಳ್ಳುವಂತೆ ಸಮಿತಿಯು ನಿರ್ಣಯ ಕೈಗೊಂಡಿರುತ್ತದೆ.

ಸಮಿತಿಯ ನಿರ್ಣಯದಂತೆ, ದಕ್ಷಿಣ ವಲಯ–2ರ ವ್ಯಾಪ್ತಿಯಲ್ಲಿ ಬರುವ ಉದ್ಯಾನವನಗಳ ನಿರ್ವಹಣೆಯನ್ನು ಕೈಗೊಳ್ಳಲು ಲೆಕ್ಕಶೀರ್ಷಿಕೆ P0088ರ ಅಡಿಯಲ್ಲಿ ರೂ.133.23ಲಕ್ಷಗಳ ಮೊತ್ತದಲ್ಲಿ ಅನುಷ್ಠಾನಗೊಳಿಸಲು ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ) ರವರ ದಿನಾಂಕ:27–12–2013 ರ ಟಿಪ್ಪಣಿ.

**ನಿರ್ಣಯ:– ಮುಂದೂಡಿದೆ.**

**3. ವಿಷಯದ ಸಂಖ್ಯೆ:ತೋ/ಸ್ಥಾ/ಸ/17/13–14, ದಿನಾಂಕ: 27–12–2013**

ದಕ್ಷಿಣ ವಲಯ–1 ಮತ್ತು ದಕ್ಷಿಣ ವಲಯ–2ರ ವ್ಯಾಪ್ತಿಗೆ ಬರುವ ಉದ್ಯಾನವನಗಳ ನಿರ್ವಹಣೆ ಕಾರ್ಯಕ್ರಮವನ್ನು 2013–14ನೇ ಸಾಲಿನ ಆಯವ್ಯಯದಲ್ಲಿ ಇರುವ ಅನುದಾನಕ್ಕೆ ಅನುಗುಣವಾಗಿ ಹಾಗೂ ಉಲ್ಲೇಖ–1ರನ್ವಯ ದಕ್ಷಿಣ ವಲಯ–1 ಮತ್ತು ದಕ್ಷಿಣ ವಲಯ–2ಕ್ಕೆ ಹಂಚಿಕೆಯಾಗಿರುವ ರೂ.250.00ಲಕ್ಷಗಳಿಗೆ ಉದ್ಯಾನವನಗಳನ್ನು ನಿರ್ವಹಣೆ ಮಾಡಲು ಅನುದಾನ ಕಾಯ್ದಿರಿಸಿ ಸದರಿ ಕಾರ್ಯಕ್ರಮವನ್ನು ಕೈಗೊಳ್ಳುವಂತೆ ಸಮಿತಿಯು ನಿರ್ಣಯ ಕೈಗೊಂಡಿರುತ್ತದೆ.

ಸಮಿತಿಯ ನಿರ್ಣಯದಂತೆ, ದಕ್ಷಿಣ ವಲಯ–1ರ ವ್ಯಾಪ್ತಿಯಲ್ಲಿ ಬರುವ ಉದ್ಯಾನವನಗಳ ನಿರ್ವಹಣೆಯನ್ನು ಕೈಗೊಳ್ಳಲು ಲೆಕ್ಕಶೀರ್ಷಿಕೆ P0088ರ ಅಡಿಯಲ್ಲಿ ರೂ.121.55 ಲಕ್ಷಗಳ ಮೊತ್ತದಲ್ಲಿ ಅನುಷ್ಠಾನಗೊಳಿಸಲು ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 27–12–2013 ರ ಟಿಪ್ಪಣಿ.

**<u>ನಿರ್ಣಯ</u>:– ಮುಂದೂಡಿದೆ.**

**4. <u>ವಿಷಯದ ಸಂಖ್ಯೆ:ತೋ/ಸ್ಥಾ/ಸ/18/13–14, ದಿನಾಂಕ: 28–12–2013</u>**

2013–14ನೇ ಸಾಲಿನಲ್ಲಿ ಸಸ್ಯಕ್ಷೇತ್ರಗಳಲ್ಲಿ ಸಸಿಗಳನ್ನು ರೀ–ಬ್ಯಾಗಿಂಗ್ ಮಾಡುವ ಹಾಗೂ ಸಸಿಗಳನ್ನು ಪೋಷಿಸುವ ಕಾಮಗಾರಿಯನ್ನು ದಿನಾಂಕ:01–01–2014 ರಿಂದ 31–03–2014 ರವರೆಗೆ ನಿರ್ವಹಿಸಲು ಮತ್ತು ಮರಗಳ ವ್ಯವಸ್ಥಿತ ನಿರ್ವಹಣೆ ಕಾಮಗಾರಿಯನ್ನು ದಿನಾಂಕ:01–04–2014 ರಿಂದ 30–09–2014 ರವರೆಗೆ ನಿರ್ವಹಿಸುವ ಕಾಮಗಾರಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರ್ ಪ್ರಕ್ರಿಯೆಯನ್ನು ನಡೆಸುವ ಸಲುವಾಗಿ ಅನುಮೋದನೆಯನ್ನು ಕೋರಿರುತ್ತಾರೆ.

ಸದರಿ ಕಾಮಗಾರಿಯು ಋತುಮಾನಕ್ಕನುಗುಣವಾಗಿ ನಿರ್ವಹಿಸುವ ಕಾಮಗಾರಿಗಳಾಗಿದ್ದು, ತುರ್ತಾಗಿ ಟೆಂಡರ್ ಪ್ರಕ್ರಿಯೆಯನ್ನು ನಡೆಸಬೇಕಾಗಿರುವುದರಿಂದ ಸಸ್ಯಕ್ಷೇತ್ರಗಳಲ್ಲಿ ಸಸಿಗಳನ್ನು ರೀ–ಬ್ಯಾಗಿಂಗ್ ಮಾಡಲು ಹಾಗೂ ಸಸಿಗಳನ್ನು ಪೋಷಿಸಲು ತಗಲುವ ಅಂದಾಜು ಮೊತ್ತ ರೂ.70.65 ಲಕ್ಷಗಳಾಗಿದ್ದು, ಮರಗಳ ವ್ಯವಸ್ಥಿತ ನಿರ್ವಹಣೆ ಕಾಮಗಾರಿಗೆ ರೂ.166.01 ಲಕ್ಷಗಳ ವೆಚ್ಚವಾಗಲಿದ್ದು, ಈ ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರ್ ಪ್ರಕ್ರಿಯೆ ನಡೆಸಲು ಹಾಗೂ ಇದಕ್ಕೆ ತಗಲುವ ವೆಚ್ಚಗಳಿಗೆ 2013–14ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆಗಳಡಿ ಜಾಬ್‌ಕೋಡ್ ನೀಡಲು ಅನುಮೋದನೆಯನ್ನು ನೀಡುವ ಸಂಬಂಧ, ಈ ಪ್ರಸ್ತಾವನೆಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ಆಯುಕ್ತರವರ ದಿನಾಂಕ: 24–12–2013 ರ ಟಿಪ್ಪಣಿ.

**<u>ನಿರ್ಣಯ</u>:– ಮುಂದೂಡಿದೆ.**

**5. <u>ವಿಷಯದ ಸಂಖ್ಯೆ:ತೋ/ಸ್ಥಾ/ಸ/19/13–14, ದಿನಾಂಕ: 28–12–2013</u>**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ದಕ್ಷಿಣ ವಲಯ ವ್ಯಾಪ್ತಿಯ ಪದ್ಮನಾಭನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ:167ರ ಯಡಿಯೂರು ಕೆರೆ ಸುಮಾರು 1400 ವರ್ಷಗಳಿಗೂ ಹೆಚ್ಚು ಇತಿಹಾಸವಿರುವ ಮತ್ತು ಬೆಂಗಳೂರು ಮಹಾನಗರದ ಅತ್ಯಂತ ಹಳೆಯದಾದ ಐತಿಹಾಸಿಕ ಯಡಿಯೂರು ಕೆರೆಯ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳಲು ಸ್ಥಳೀಯ ಪಾಲಿಕೆ ಸದಸ್ಯರಾದ ಶ್ರೀ.ಎನ್.ಆರ್.ರಮೇಶ್ ರವರು ಮಾನ್ಯ ಆಯುಕ್ತರವರಿಗೆ ಪತ್ರ ನೀಡಿರುತ್ತಾರೆ.

ಅದರಂತೆ, ಸದರಿ ಕಾಮಗಾರಿಯನ್ನು 2013–14ನೇ ಸಾಲಿನ ಕರ್ನಾಟಕ ಲೋಕೋಪಯೋಗಿ ಇಲಾಖೆಯ ದರಪಟ್ಟಿಯ ದರಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿರುತ್ತದೆ ಹಾಗೂ ಸದರಿ ಕಾಮಗಾರಿಗೆ 2013–14ನೇ ಸಾಲಿನ ಆಯವ್ಯಯದ ಪಿ–2434ರ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 167–14000020 ರಂತೆ ಜಾಬ್ ಕೋಡ್ ನೀಡಲಾಗಿರುತ್ತದೆ. ಆದ್ದರಿಂದ, ಆಡಳಿತಾತ್ಮಕ

ಅನುಮೋದನೆ ನೀಡಲು ಕೋರಿ ಕಡತಗಳನ್ನು ಸಲ್ಲಿಸಿರುತ್ತಾರೆ. ಕಾಮಗಾರಿಯ ವಿವರ ಈ ಕೆಳಕಂಡಂತಿವೆ.

| Sl. No. | Name of work | Amount in Lakhs |
|---|---|---|
| 1. | Improvements to Yediyur Lake in Ward No.167. | 125.00 |
| | **Total** | **125.00** |

ಕಾರ್ಯಪಾಲಕ ಅಭಿಯಂತರರು(ಪದ್ಮನಾಭನಗರ) ವಿಭಾಗರವರು ಸಲ್ಲಿಸಿರುವ ಪ್ರಸ್ತಾವನೆಯಂತೆ ಈ ಮೇಲ್ಕಂಡ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಕೋರಿರುವ ಪ್ರಸ್ತಾವನೆಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ)ರವರ ದಿನಾಂಕ:28–12–2013 ರ ಟಿಪ್ಪಣಿ.

**ನಿರ್ಣಯ:– ಮಾನ್ಯ ವಿಶೇಷ ಆಯುಕ್ತರು (ಯೋಜನೆ)ರವರ ದಿನಾಂಕ:28–12–2013 ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

ಕೊನೆಯದಾಗಿ, ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳು ಮೇಲಿನ ವಿಷಯಗಳ ಬಗ್ಗೆ ಚರ್ಚಿಸಿರುವಂತೆ ಕ್ರಮ ವಹಿಸಲು, ಮಾನ್ಯ ಆಯುಕ್ತರು ಕಾರ್ಯಪ್ರವೃತ್ತರಾಗಬೇಕೆಂದು ಕೋರುತ್ತಾ, ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಅಧ್ಯಕ್ಷರು
ತೋಟಗಾರಿಕೆ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ